## ತಹಶೀಲ್ದಾರರು, ಬಳ್ಳಾರಿ. ಇವರ ನ್ಯಾಯಾಲಯದ ನಡವಳಿಗಳು

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ಕೆ.ಈಶ್ವರಮ್ಮ ಗಂಡ ಕುರುಬರ ಸಿದ್ದಣ್ಣ ಪ್ರಭಾತ್ ಟಾಕೀಸ್ ಹತ್ತಿರ, ವಾರ್ಡ್ ನಂ.5, ಗೌಳೇರಹಟ್ಟಿ, ಬಳ್ಳಾರಿ. | 1) ಕಂದಾಯ ನಿರೀಕ್ಷಕರು, ಬಳ್ಳಾರಿ.<br>2) ಗ್ರಾಮ ಲೆಕ್ಕಾಧಿಕಾರಿಗಳು, ಬಳ್ಳಾರಿ. |

*ಪೀಠಿಕೆ :*

ಬಳ್ಳಾರಿ ತಾಲೂಕು, ಬಳ್ಳಾರಿ ಹೋಬಳಿ, ಬಳ್ಳಾರಿಯ ಶ್ರೀ ಕೆ.ಶಿವಪ್ಪ ತಂದೆ ಕೆ.ವೆಂಕಟರಮಣಪ್ಪ ಎಂಬುವವರ ಇವರ ಮಾಲೀಕತ್ವದಲ್ಲಿದ್ದ ಬಳ್ಳಾರಿ ಸರ್ವೆ ನಂ. 66 ಎ/2 ವಿಸ್ತೀರ್ಣ 0.05.50 ಸೆಂಟ್ಸ್ ಜಮೀನನ್ನು ಬಳ್ಳಾರಿ ನಿವಾಸಿಯಾದ ಕೆ.ಈಶ್ವರಮ್ಮ ಗಂಡ ಕುರುಬರ ಸಿದ್ದಣ್ಣ ಎಂಬುವವರಿಗೆ ದಸ್ತಾವೇಜು ಸಂಖ್ಯೆ BLY-1-09139/ 2006-07 ದಿನಾಂಕ : 25.10.2006 ರಂತೆ ಕ್ರಯಕ್ಕೆ ನೀಡಿರುತ್ತಾರೆ. ಈ ಕ್ರಯದಂತೆ ಕ್ರಯದಾರರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡುವ ವಿಚಾರದಲ್ಲಿ ಕಂದಾಯ ನಿರೀಕ್ಷಕರು ಎಂ.ಆರ್. ಸಂಖ್ಯೆ 171/2006–07 ದಿನಾಂಕ 12–12–2016 ರಲ್ಲಿ ಯಾವುದೇ ತಕರಾರು ಬಂದಿರುವುದಿಲ್ಲ. ಆದರೆ ಕ್ರಯದಾರರು ಕೃಷಿಕರಾದ ಬಗ್ಗೆ ಇರದ ಕಾರಣ, ಸದರಿ ವಿವಾದಾಸ್ಪದ ಪ್ರಕರಣವೆಂದು ವಿಚಾರಣೆಗಾಗಿ ತಹಶೀಲ್ದಾರರು, ಬಳ್ಳಾರಿ ಇವರಿಗೆ ಸಲ್ಲಿಸಿರುತ್ತಾರೆ.

ಈ ಬಗ್ಗೆ ದಿನಾಂಕ 29.08.2016ರಂದು ವಿಚಾರಣೆಗೆ ಹಾಜರಾಗಲು ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸ್ ನೀಡಿ, ವಿಚಾರಣೆ ನಡೆಸಿದ್ದು, ವಾದಿಗಳು ಕ್ರಯದಂತೆ ಹಕ್ಕು ಬದಲಾವಣೆ ಮಾಡಿಕೊಡುವಂತೆ ತಮ್ಮ ವಕೀಲರ ಮುಖಾಂತರ ಕೋರಿದ್ದು, ಸದರಿ ಪ್ರಕರಣದಲ್ಲಿ ವಾದಿಗಳು ಕೃಷಿಕರು ಎನ್ನುವ ಬಗ್ಗೆ ವಾದಿಯ ಗಂಡನ ಹೆಸರಿನಲ್ಲಿ ವೇಣಿವೀರಾಪುರ ಗ್ರಾಮದ ಸರ್ವೆ ನಂ. 360 ವಿಸ್ತೀರ್ಣ 11.48 ಎಕರೆ ಸೆಂಟ್ಸ್ ಪಿತ್ರಾರ್ಜಿತ ಜಮೀನು ಇರುವುದರಿಂದ ಕೃಷಿಕರೆಂದು ದೃಢಪಟ್ಟಿದೆ. ಕಾರಣ ಕ್ರಯ ಪತ್ರ BLY-1-09139/ 2006-07 ದಿನಾಂಕ : 25.10.2006 ರಂತೆ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಬೇಕಾಗಿರುವುದರಿಂದ ಈ ಕೆಳಗಿನಂತೆ

*ಸಂ/ಕಂ/ಪಹಣಿ–2/ವಿವಾದ/147/2016–17* *ದಿನಾಂಕ :* 8.8.16

### ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಬಳ್ಳಾರಿ ಸರ್ವೆ ನಂ. 66ಎ/2 ವಿಸ್ತೀರ್ಣ 0.05.50 ಎಕರೆ ಜಮೀನನ್ನು ಕ್ರಯ ದಸ್ತಾವೇಜು BLY-1-09139/ 2006-07 ದಿನಾಂಕ : 25.10.2006 ರಂತೆ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ 8-8-16 ರಂದು ಈ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

Received copy

8/8/16

ತಹಶೀಲ್ದಾರರು,
ಬಳ್ಳಾರಿ.

ಗೆ,

1) ವಾದಿಗಳಿಗೆ
2) ಗಣಕೀಕರಣ ಶಾಖೆ, ಭೂಮಿಕೇಂದ್ರ, ತಾಲೂಕು ಕಛೇರಿ, ಬಳ್ಳಾರಿ.